ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
(ಕುಂದಾಪುರದಲ್ಲಿ ಕಾರ್ಯನಿರ್ವಹಣೆ) ಕುಂದಾಪುರ

**ಸ್ಪೆಷಲ್ ಕೇಸ್ ನಂಬ್ರ 510/2023**

ಪಿರ್ಯಾದುದಾರರು : ಸರ್ಕಾರದ ಪರವಾಗಿ ಗಂಗೊಳ್ಳಿ ಪೋಲೀಸರು

ವಿರುದ್ಧ

ಆರೋಪಿ : 1. ಸಂತೋಷ ಯಾನೆ ಬ್ರ್ಯಾಂಡ್ ಸಂತು
ಬಿನ್: ರಮೇಶ ಪೂಜಾರಿ
ವಯಸ್ಸು: 30 ವರ್ಷ,
ವಾಸ: ಗಣೇಶ ಕೃಪಾ, ತಾರೀಬೇರು,
ಆಲೂರು ಗ್ರಾಮ, ಕುಂದಾಪುರ ತಾಲೂಕು,
ಉಡುಪಿ ಜಿಲ್ಲೆ.

2. ಆದಿತ್ಯ ಪೂಜಾರಿ
ತಂದೆ: ಅಶೋಕ ಪೂಜಾರಿ
ವಯಸ್ಸು: 28 ವರ್ಷ,
ವಾಸ: ಚಿಕ್ಕನ ಮನೆ, ಚಿಕ್ಕಳ್ಳಿ,
ನಾಡಾ ಗ್ರಾಮ, ಬೈಂದೂರು ತಾಲೂಕು,
ಉಡುಪಿ ಜಿಲ್ಲೆ.

3. ಸನತ್ ಶೆಟ್ಟಿ
ತಂದೆ: ಅಶೋಕ್ ಶೆಟ್ಟಿ
ವಯಸ್ಸು: 24 ವರ್ಷ,
ವಾಸ: ಸಂಗಮ, ಮಕ್ಕಿ ಮನೆ, ಸಂಸಾಡಿ,
ನಾಡಗುಡ್ಡೆಯಂಗಡಿ ಗ್ರಾಮ, ಬೈಂದೂರು ತಾಲೂಕು.
ಉಡುಪಿ ಜಿಲ್ಲೆ.

4. ಪವನ್ ಶೆಟ್ಟಿ
ಬಿನ್: ಬಾಲಚಂದ್ರ ಶೆಟ್ಟಿ
ವಯಸ್ಸು: 29 ವರ್ಷ,
ವಾಸ: ಮನೆ ನಂಬ್ರ 1-151ಬಿ,
ಸೇನಾಪುರ ಸೊಸೈಟಿ ಹತ್ತಿರ,
ಸೇನಾಪುರ ಗ್ರಾಮ, ಕುಂದಾಪುರ ತಾಲೂಕು,

ಉಡುಪಿ ಜಿಲ್ಲೆ.

5. ದೀಪಕ್ ಕುಮಾರ್
ಬಿನ್ಃ ಶ್ರೀನಿವಾಸ
ವಯಸ್ಸುಃ 33 ವರ್ಷ,
ವಾಸಃ ಮಕ್ಕಿ ಮನೆ, ಕಡ್ಕೆ,
ನಾಡಾ ಗ್ರಾಮ,
ಬೈಂದೂರು ತಾಲೂಕು, ಉಡುಪಿ ಜಿಲ್ಲೆ.

6. ಸುದರ್ಶನ್ ಶೆಟ್ಟಿ
ಬಿನ್ಃ ರಾಜೀವ ಶೆಟ್ಟಿ
ವಯಸ್ಸುಃ 29 ವರ್ಷ,
ವಾಸಃ ಮರತ್ತೂರು, ಗುಡ್ಡೆಯಂಗಡಿ,
ನಾಡಾ ಗ್ರಾಮ,
ಬೈಂದೂರು ತಾಲೂಕು, ಉಡುಪಿ ಜಿಲ್ಲೆ.

7. ಚೇತನ್ ಶೆಟ್ಟಿ
ಬಿನ್ಃ ಕರುಣಾಕರ ಶೆಟ್ಟಿ
ವಯಸ್ಸುಃ 26 ವರ್ಷ,
ವಾಸಃ ಮಾತಶ್ರೀ ನಿಲಯ,
ಮನೆ ನಂಬ್ರ 1-80, ಬಡಾಕೆರೆ, ವಕ್ಕೇರಿ,
ಬಡಾಕೆರೆ ಗ್ರಾಮ, ಬೈಂದೂರು ತಾಲೂಕು.

********

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313ರಡಿಯಲ್ಲಿ ಆರೋಪಿ ಹೇಳಿಕೆ

ಪ್ರ.ನಂ.1: ನೀನು ಅಭಿಯೋಜನೆಯ ಪರ ನುಡಿದ ಸಾಕ್ಷಿಗಳ ಹೇಳಿಕೆಯನ್ನು ಆಲಿಸಿದ್ದೀರಾ?

ಉತ್ತರಃ ಹೌದು

**ಪ್ರ.ನಂ.2: ಡಾಃ ಸನ್ಮಾನ್ ಶೆಟ್ಟಿ (ಪಿಡಬ್ಲ್ಯೂ-6)** ರವರು ತಮ್ಮ ಸಾಕ್ಷ್ಯದಲ್ಲಿ ತಾನು ಕುಂದಾಪುರದ ಸಾರ್ವಜನಿಕ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸಾ ವೈದ್ಯಾಧಿಕಾರಿಯಾಗಿ ಸೇವೆಯಲ್ಲಿದ್ದಾಗ ದಿನಾಂಕಃ20-09-2023ರಂದು ರಾತ್ರಿ 11.26 ಗಂಟೆಗೆ ಸುರೇಶ್ ಎಂಬ ಗಾಯಾಳು ತಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದು, ಅವರು ಅದೇ ದಿನ ರಾತ್ರಿ 8.30 ಗಂಟೆ ಸಮಯಕ್ಕೆ ಗುಡ್ಡೆಯಂಗಡಿಯ ಚಂದ್ರಿಕಾ ಬಾರ್ ಬಳಿ ಆರು ಜನ

ವ್ಯಕ್ತಿಗಳು ದೊಣ್ಣೆ ಮತ್ತು ಕತ್ತಿಯಿಂದ ಹಲ್ಲೆ ಮಾಡಿರುವುದಾಗಿ ಹಲ್ಲೆಯ ಇತಿಹಾಸವನ್ನು ತಿಳಿಸಿದ್ದು, ಸದ್ರಿ ಗಾಯಾಳುವನ್ನು ತಾನು ಪರೀಕ್ಷೆ ಮಾಡಿದಾಗ ಆತನ ಎಡ ಕಣ್ಣಿನ ಬದಿಯಲ್ಲಿ ಜಜ್ಜಿದ ಗಾಯ, ಮೂಗಿಯ ತುದಿಯಲ್ಲಿ ತರಚಿದ ಗಾಯ, ತಲೆಯ ಹಿಂಬದಿಯಲ್ಲಿ ಗುದ್ದಿದ ತಾಜಾ ಸ್ವರೂಪದ ಗಾಯ, ಬಲ ಮುಂಗೈಯಲ್ಲಿ ನೋವು ಇದ್ದಿದ್ದು, ಮೇಲೆ ಹೇಳಿದ ಎಲ್ಲಾ ಗಾಯಗಳು ತಾಜಾ ಹಾಗೂ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಈ ಬಗ್ಗೆ ತಾನು ಗಾಯದ ಪ್ರಮಾಣ ಪತ್ರ (ನಿಪಿ-17) ನೀಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

**ಪ್ರ.ನಂ.3:** ಇದೇ ಸಾಕ್ಷಿ ಮುಂದುವರಿದು ಸದ್ರಿ ಗಾಯಾಳು ದಿಃ**20-09-2023**ರಂದು **12.00** ಗಂಟೆಗೆ ತಮ್ಮ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದು, ನಂತರ ಅದೇ ದಿನ ರಾತ್ರಿ **12.30**ಗಂಟೆಗೆ ವೈದ್ಯರ ಸಲಹೆಗೆ ವಿರುದ್ಧವಾಗಿ ಬಿಡುಗಡೆ ಹೊಂದಿದ್ದು, ದಿನಾಂಕಃ**21-09-2023**ರಂದು ಬೆಳಿಗ್ಗೆ **11.25**ಕ್ಕೆ ಪುನಃ ಸದ್ರಿ ಗಾಯಾಳು ಆಸ್ಪತ್ರೆಗೆ ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆದು **23-09-2023**ರಂದು ಬಿಡುಗಡೆ ಹೊಂದಿರುತ್ತಾರೆಂದು ಹಾಗೂ ಗಾಯಾಳುವಿನ ಕಣ್ಣಿನ ಬಳಿ ಆಗಿರುವ ಗಾಯದ ಬಗ್ಗೆ ಸಿಟಿ ಸ್ಕ್ಯಾನ್ ಮಾಡಲಾಗಿದ್ದು, ಸಿಟಿ ಸ್ಕ್ಯಾನ್ ವರದಿಯಲ್ಲಿ ಯಾವುದೇ ಸಮಸ್ಯೆ ಇರಲಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

**ಪ್ರ.ನಂ.4:** ಇದೇ ಸಾಕ್ಷಿ ಮುಂದುವರಿದು ದಿನಾಂಕಃ**20-09-2023** ರಾತ್ರಿ **11.50**ಕ್ಕೆ ಸುಕುಮಾರ ಎಂಬ ಗಾಯಾಳು ತಮ್ಮ ಆಸ್ಪತ್ರೆಗೆ ಚಿಕಿತ್ಸೆಗೆ ಬಂದಿದ್ದು, ಅದೇ ದಿನ ರಾತ್ರಿ **8.30** ಗಂಟೆಗೆ **6** ಜನರು ಗುಡ್ಡೆಯಂಗಡಿಯ ಚಂದ್ರಿಕಾ ಬಾರ್ ಬಳಿ ಕೈಯಿಂದ ಹಲ್ಲೆ ಮಾಡಿರುವುದಾಗಿ ಹಲ್ಲೆಯ ಇತಿಹಾಸವನ್ನು ತಿಳಿಸಿದ್ದು, ಸದ್ರಿ ಗಾಯಾಳುವನ್ನು ಪರೀಕ್ಷೆ ಮಾಡಿದಾಗ ಆತನ ಎದೆಯ ಭಾಗದಲ್ಲಿ ನೋವು ಇರುವುದಾಗಿ ಹೇಳಿದ್ದು, ಆತನಿಗೆ ಯಾವುದೇ ಗಾಯಗಳು ಆದ ಕುರುಹು ಇರುವುದಿಲ್ಲವೆಂದು ಹಾಗೂ ಮೇಲೆ ಹೇಳಿದ ಗಾಯ ಸಾಮಾನ್ಯ ಸ್ವರೂಪದ್ದಾಗಿದ್ದು, ಈ ಬಗ್ಗೆ ತಾನು ಗಾಯದ ಪ್ರಮಾಣ ಪತ್ರ (ನಿಪಿ-**18**) ನೀಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

**ಪ್ರ.ನಂ.5:** ಇದೇ ಸಾಕ್ಷಿ ಮುಂದುವರಿದು ದಿನಾಂಕಃ**20-09-2023**ರಂದು ರಾತ್ರಿ **11.54** ಗಂಟೆಗೆ ಶ್ರೀಕಾಂತ್ ಎನ್ನುವ ಗಾಯಾಳು ತಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದು, ದಿನಾಂಕಃ**20-09-2023**ರಂದು ರಾತ್ರಿ **8.30** ಗಂಟೆಗೆ ಗುಡ್ಡೆಯಂಗಡಿಯ ಚಂದ್ರಿಕಾ ಬಾರ್ ಬಳಿ ಹಲ್ಲೆಯಾಗಿರುವುದಾಗಿ ಹಲ್ಲೆಯ ಇತಿಹಾಸವನ್ನು ತಿಳಿಸಿದ್ದು, ಸದ್ರಿ ಗಾಯಾಳುವನ್ನು ಪರೀಕ್ಷೆ ಮಾಡಿದಾಗ ಆತನ ಬಲ ಭುಜದಲ್ಲಿ ನೋವು ಇರುವುದಾಗಿ ತಿಳಿಸಿದ್ದು ಆತನ ದೇಹದ ಮೇಲೆ ಯಾವುದೇ ಗಾಯ ಕಂಡು ಬಂರುವುದಿಲ್ಲವೆಂದು ಹಾಗೂ ಮೇಲೆ ಹೇಳಿದ ಗಾಯ

ಸಾಮಾನ್ಯ ಸ್ವರೂಪದ್ದಾಗಿದ್ದು, ಈ ಬಗ್ಗೆ ತಾನು ಗಾಯದ ಪ್ರಮಾಣ ಪತ್ರ (ನಿಪಿ-19) ನೀಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

ಪ್ರ.ನಂ.6: ಇದೇ ಸಾಕ್ಷಿ ಮುಂದುವರಿದು ನಿಪಿ-17ರಲ್ಲಿ ನಮೂದಿಸಿದ 1ನೇ ಗಾಯವು ದೊಣ್ಣೆಯಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆ ಇರುತ್ತದೆಂದೂ ಹಾಗೂ 2 ರಿಂದ 4ನೇ ಗಾಯಗಳು ಒಬ್ಬ ವ್ಯಕ್ತಿಗೆ ಕೈಗಳಿಂದ ಹಲ್ಲೆ ಮಾಡಿ ಕಾಂಕ್ರೀಟ್ ನೆಲದ ಮೇಲೆ ದೂಡಿದರೆ ಆಗುವ ಸಾಧ್ಯತೆ ಇರುತ್ತದೆಂದೂ ಹಾಗೂ ನಿಪಿ-18 ರಲ್ಲಿರುವ ಗಾಯವು ಒಬ್ಬ ವ್ಯಕ್ತಿಗೆ ಕೈಯಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆ ಇರುತ್ತದೆಂದು ಹಾಗೂ ನಿಪಿ-19 ರಲ್ಲಿ ನಮೂದಿಸಿದ ಗಾಯವು ಒಬ್ಬ ವ್ಯಕ್ತಿಗೆ ಕೈಯಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆ ಇರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

ಪ್ರ.ನಂ.7: **ಹರೀಶ್ ಆರ್ (ಪಿಡಬ್ಲ್ಯೂ -12)** ರವರು ತಮ್ಮ ಸಾಕ್ಷ್ಯದಲ್ಲಿ ತಾನು ಗಂಗೊಳ್ಳಿ ಪೋಲೀಸು ಠಾಣೆಯಲ್ಲಿ ಪೋಲೀಸು ಉಪ ನಿರೀಕ್ಷಕನಾಗಿ ಸೇವೆ ಸಲ್ಲಿಸುತ್ತಿದ್ದಾಗ ದಿನಾಂಕಃ21-09-2023 ರಂದು ಕುಂದಾಪುರ ಪೋಲೀಸು ಠಾಣೆಯಿಂದ ತಮ್ಮ ಠಾಣೆಗೆ ಬಂದ ಇ-ಮೇಲ್ ಸಂದೇಶವನ್ನು ಸ್ವೀಕರಿಸಿಕೊಂಡು ಅದರಂತೆ ತಾನು ಬೆಳಿಗ್ಗೆ 11.00 ಗಂಟೆಗೆ ಕುಂದಾಪುರ ಸರಕಾರಿ ಆಸ್ಪತ್ರೆಗೆ ಭೇಟಿ ಕೊಟ್ಟು ಅಲ್ಲಿ ಒಳರೋಗಿಯಾಗಿ ದಾಖಲಾಗಿದ್ದ ಸುರೇಶ್ ರವರನ್ನು ವಿಚಾರಣೆ ಮಾಡಿ ಅವನು ನೀಡಿದ ಲಿಖಿತ ಫಿರ್ಯಾದಿ (ನಿಪಿ-1) ಪಡೆದುಕೊಂಡು ನಂತರ ಅದನ್ನು ತಮ್ಮ ಠಾಣಾ ಅಪರಾಧ ಕ್ರಮ ಸಂಖ್ಯೆ 96/2023 ರಂತೆ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿ (ನಿಪಿ-24) ತಯಾರಿಸಿ ಅದನ್ನು ತಮ್ಮ ಮೇಲಾಧಿಕಾರಿಯವರಿಗೆ ಮತ್ತು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡು ನಂತರ ಪ್ರಕರಣವನ್ನು ತಮ್ಮ ಮೇಲಾಧಿಕಾರಿಯವರಿಗೆ ವಹಿಸಿಕೊಟ್ಟಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

ಪ್ರ.ನಂ.8: ಇದೇ ಸಾಕ್ಷಿ ಮುಂದುವರಿದು ದಿನಾಂಕಃ21-09-2023ರಂದು ಪ್ರಕರಣದ ಆರೋಪಿತರಾದ ನಿಮ್ಮನ್ನು ವಶಕ್ಕೆ ಪಡೆದು ಅವರ ಮುಂದೆ ಹಾಜರುಪಡಿಸಿಸುವಂತೆ ಪೋಲೀಸು ಉಪಾಧೀಕ್ಷಕರು ತನಗೆ ಜ್ಞಾಪನ (ನಿಪಿ-25) ನೀಡಿದ್ದು, ಸದ್ರಿ ಜ್ಞಾಪನವನ್ನು ಸ್ವೀಕರಿಸಿಕೊಂಡಿರುತ್ತೇನೆಂದು ಹಾಗೂ ಈ ಪ್ರಕರಣದ 7ನೇ ಆರೋಪಿಯಾದ ಚೇತನ್ ಶೆಟ್ಟಿ ನೀನು ಬೈಂದೂರು ಯಡ್ತರೆ ಗ್ರಾಮದ ಜಂಕ್ಷನ್ ಬಳಿ ಇರುವುದಾಗಿ ಮಾಹಿತಿ ಬಂದಂತೆ ತಾನು ಸಿಬ್ಬಂದಿಯವರೊಂದಿಗೆ ಸದ್ರಿ ಸ್ಥಳಕ್ಕೆ ಹೋದಾಗ ತಮ್ಮ ಸಿಬ್ಬಂದಿಯವರು ನಿನ್ನನ್ನು (7ನೇ ಆರೋಪಿ) ಗುರುತಿಸಿ ನಿನ್ನ ಹೆಸರು ವಿಳಾಸ ಕೇಳಿ ನೀನು (7ನೇ ಆರೋಪಿ) ಈ ಪ್ರಕರಣದ ಆರೋಪಿ ಎಂದು ಖಾತ್ರಿಪಡಿಸಿಕೊಂಡು ನಿನ್ನನ್ನು (7ನೇ ಆರೋಪಿ) ವಶಕ್ಕೆ ಪಡೆದುಕೊಂಡು ಅದೇ ದಿನ ಬೆಳಿಗ್ಗೆ 8.15 ಗಂಟೆಗೆ ವರದಿಯೊಂದಿಗೆ (ನಿಪಿ-26) ತಮ್ಮ ಮೇಲಾಧಿಕಾರಿಯವರ ಮುಂದೆ

ಹಾಜರುಪಡಿಸಿರುತ್ತೇನೆಂದು ಹಾಗೂ ನ್ಯಾಯಾಲಯದ ಮುಂದಿರುವ 7ನೇ ಆರೋಪಿಯಾದ ಚೇತನ್ ಶೆಟ್ಟಿ ನಿನ್ನನ್ನು ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀನೇನು ಹೇಳುತ್ತೀ?

ಉತ್ತರಃ ಸುಳ್ಳು

ಪ್ರ.ನಂ.**9:** ನೀನು ಏನಾದರೂ ಹೇಳುವುದು ಇದೆಯಾ?

ಉತ್ತರಃ ಇಲ್ಲಾ

ಪ್ರ.ನಂ.**10:** ನಿನ್ನ ಪರ ಸಾಕ್ಷಿದಾರರನ್ನು ವಿಚಾರಣೆ ಮಾಡುತ್ತೀರಾ?

ಉತ್ತರಃ ಇಲ್ಲಾ

ಮೇಲ್ಕಂಡ ಹೇಳಿಕೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾಗಿ, ಕೇಳಲಾಗಿ ಅವರು ಹೇಳಿದ ಉತ್ತರವನ್ನು ದೃಢೀಕರಿಸಲಾಗಿದೆ.

ದಿನಾಂಕಃ **12-06-2026**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕುಂದಾಪುರ.